**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.113/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಸ್.ರಾಜಪ್ಪ | ಪ್ರಾ.ಸಾಃ 6 |
| ತಂದೆಯ/ಗಂಡನ ಹೆಸರು | : | ಅಕ್ಕಿ ಸಿದ್ದಪ್ಪ | ಚಾಸಾಃ 7 |
| ವಯಸ್ಸು | : | 56 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ದೊಗ್ಗನಾಳು ಗ್ರಾಮ | ದಿಃ12.02.2026 |

**ಮುಖ್ಯ ವಿಚಾರಣೆ : ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರ ಅಡಿಯಲ್ಲಿ ಸಾಕ್ಷ್ಯ:**

ಚಾಸಾ.1, 4 ರಿಂದ 6 ರವರು ಮತ್ತು 8 ರಿಂದ 10 ರವರು ಗೊತ್ತು. ಆರೋಪಿ ಗೊತ್ತಿಲ್ಲ. ಚಾಸಾ.1 ಮತ್ತು 1 ನೇ ಆರೋಪಿಯ ವಿವಾಹ ಸುಮಾರು 15 ವರ್ಷಗಳ ಹಿಂದೆ ಮಲ್ಲಾಡಿಹಳ್ಳಿ ಗ್ರಾಮದ ಬನಶಂಕರಿ ಕಲ್ಯಾಣ ಮಂಟಪದಲ್ಲಿ ನೆರವೇರಿರುತ್ತದೆ. ವಿವಾಹದ ನಂತರ ಚಾಸಾ.1 ಮತ್ತು 1 ನೇ ಆರೋಪಿ ಎಲ್ಲಿ ಇದ್ದರು ಎಂದು ಗೊತ್ತಿಲ್ಲ. ಚಾಸಾ.1 ಮತ್ತು ಆರೋಪಿತನ ವೈವಾಹಿಕ ಜೀವನದ ಕುರಿತು ನನಗೆ ಗೊತ್ತಿಲ್ಲ. ಈ ಕುರಿತು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

2. ದಿನಾಂಕ 17.02.2010 ರಂದು ಚಾಸಾ.1 ಮತ್ತು 1 ನೇ ಆರೋಪಿತನ ವಿವಾಹದ ನಂತರದ 2 ವರ್ಷಗಳ ಬಳಿಕ ಚಸಾ.1 ರವರಿಗೆ ಮಕ್ಕಳಾಗಿಲ್ಲ ಎಂಬ ವಿಚಾರವಾಗಿ 1 ನೇ ಆರೋಪಿ ಚಾಸಾ.1 ರವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆಯನ್ನು ನೀಡುತ್ತಿದ್ದರು ಎಂದರೆ ಗೊತ್ತಿಲ್ಲ. ಚಾಸಾ.1 ರವರು ಸದರಿ ಹಿಂಸೆಯನ್ನು ಸಹಿಸಿಕೊಂಡು ಹೋಗುತ್ತಿದ್ದು, ಪದೇ ಪದೇ ಕಿರುಕುಳ ನೀಡುತ್ತಿದ್ದ ಕಾರಣ 1 ನೇ ಆರೋಪಿತನ ಕಿರುಕುಳವನ್ನು ಸಹಿಸದೆ ಚಾಸಾ.1 ರವರು ಆಕೆಯ ಮನೆಗೆ ಬಂದರು ಎಂದರೆ ಸರಿಯಲ್ಲ. ದಿನಾಂಖ 24.08.2013 ರಂದು ರಾತ್ರಿ 8 ಗಂಟೆ ಸಮಯದಲ್ಲಿ ಚಾಸಾ.1 ರವರು ಚಾಸಾ.4 ರವರ ಮನೆಯಲ್ಲಿ ಇದ್ದಾಗ 1 ನೇ ಆರೋಪಿ ಚಾಸಾ.1 ರವರ ಮನೆಯ ಬಳಿ ಬಂದು ಆಕೆಗೆ ಅವಾಚ್ಯ ಶಬ್ಧಗಳಿಂದ ಬೈದು, ಕೈ ಮತ್ತು ಕಾಲುಗಳಿಂದ

ಹೊಡೆದು, ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ದಿ.25.08.2013 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಅಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ.6 ಎಂದು ಗುರುತಿಸಲಾಯಿತು.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ